9

# ಹೊಸ ಒಡಂಬಡಿಕೆ - ಒಂದು ಹೊಸದಾದ ಮತ್ತು ಉತ್ತಮವಾದ ಮಾರ್ಗ

*"ಆದರೆ ಯೇಸು ಅದಕ್ಕಿಂತ ಶ್ರೇಷ್ಠವಾದ ಯಾಜಕೋದ್ಯೋಗವನ್ನು ಹೊಂದಿದವನಾಗಿದ್ದಾನೆ; ಉತ್ತಮ ವಾಗ್ದಾನಗಳ ಮೇಲೇ ಸ್ಥಾಪಿತನಾದ ಉತ್ತಮವಾದ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೇ. ಆ ಮೊದಲನೆಯ ಒಡಂಬಡಿಕೆಯು ದೋಷವಿಲ್ಲದ್ದಾಗಿದ್ದರೆ ಎರಡನೆಯ ಒಡಂಬಡಿಕೆಗೆ ಅವಕಾಶ ಇರುತ್ತಿರಲಿಲ್ಲ" (ಇಬ್ರಿಯ 8:6, 7).*

ಹೊಸ ಒಡಂಬಡಿಕೆಯು ಕೇವಲ ಹಳೇ ಒಡಂಬಡಿಕೆಯ ಪದಗಳನ್ನು ಪುನಃ ಬರೆಯುವುದು ಆಗಿದ್ದರೆ, ದೇವರು ಅದನ್ನು ಯಾಕೆ ಕೊಟ್ಟನು? ಅದು ಮೊದಲನೆಯದಂತಿದ್ದರೆ, ಅದು ಅನಾವಶ್ಯಕವಾದದ್ದಾಗುತ್ತದೆ. ಹಳೆಯ ಒಡಂಬಡಿಕೆಯು ತನ್ನ ಉದ್ದೇಶವನ್ನು ಸಾಧಿಸಿತು, ಆದುದರಿಂದ ದೇವರು ಹೊಸದಾದ ಮತ್ತು ಭಿನ್ನವಾದ ಒಡಂಬಡಿಕೆಯನ್ನು ತಂದನು.

ಹಳೇ ಒಡಂಬಡಿಕೆಯು, ಅದರ ನೇಮ ನಿಯಮಗಳೊಂದಿಗೆ ಹೊಸ, ಒಡಂಬಡಿಕೆಯೊಂದಿಗೆ ಕೆಲವು ಹೋಲಿಕೆಗಳನ್ನು ಹೊಂದಿಕೊಂಡಿರುವುದು; ಆದರೆ ಉದ್ದೇಶ, ವಿಧಾನ ಮತ್ತು - ಹೆಚ್ಚು ಪ್ರತ್ಯಕ್ಷವಾಗಿ - ಪಾಪಗಳ ಕ್ಷಮಾಪಣೆಗಾಗಿ[1] ಅದರ ಅಗತ್ಯತೆಗಳನ್ನು ಒಳಗೊಂಡ ಪ್ರಮುಖ ಭಿನ್ನತೆಗಳೂ ಇದ್ದವು. ಇದಲ್ಲದೆ, ಒಡಂಬಡಿಕೆಗಳ ಮಧ್ಯದಲ್ಲಿ ಇತರ ಅನೇಕ ಭಿನ್ನತೆಗಳಿದ್ದವು. ಕೆಲವುಗಳ ಸಂಕೇತಗಳು ಮತ್ತು ಪ್ರತಿಸಂಕೇತಗಳು ಎಂದು ಹೋಲಿಸಲ್ಪಡುವವುಗಳಾಗಿರುತ್ತವೆ ("ಎರಡು ಒಡಂಬಡಿಕೆಗಳ ಹೋಲಿಕೆ" ಎಂಬುದನ್ನು ನೋಡಿರಿ).

## "ಧರ್ಮಶಾಸ್ತ್ರ" ಮತ್ತು "ಒಡಂಬಡಿಕೆ" ಎಂಬ ಮಾತುಗಳು

ಹೊಸ ಒಡಂಬಡಿಕೆಯಲ್ಲಿ "ನಿಯಮ" ಎಂಬ ಮಾತು ಇಸ್ರಾಯೇಲ ಜನಾಂಗಕ್ಕೆ ಮೋಶೆಯ ಮುಖಾಂತರ ದೇವರು ಕೊಟ್ಟ ಯಾವುದೇ ಮತ್ತು ಎಲ್ಲಾ ಆಜ್ಞೆಗಳಿಗೆ ಉಲ್ಲೇಖಿಸಲು ಉಪಯೋಗಿಸಲ್ಪಟ್ಟಿದೆ. ಇವು ಒಡಂಬಡಿಕೆಯಾದ ಎಲ್ಲವನ್ನೂ ಒಳಗೊಂಡಿರುತ್ತದೆ. ದಶಾಜ್ಞೆಗಳನ್ನು ಅಷ್ಟೇ ಅಲ್ಲ ಆದರೆ "ನಿಬಂಧನೆಗಳು," "ನ್ಯಾಯವಿಧಿಗಳು," "ಆಜ್ಞೆಗಳು," "ನಿಯಮಗಳು," "ವಿಧಿಗಳು" ಮತ್ತು "ಸಾಕ್ಷಿಗಳು" ಎಂದು ಕರೆಯಲ್ಪಡುವ ಎಲ್ಲಾ ಅಪ್ಪಣೆಗಳನ್ನು ಒಳಗೊಂಡಿರುತ್ತದೆ.

ಪರ್ವತ ಪ್ರಸಂಗದಲ್ಲಿ, ಯೇಸುವು ಧರ್ಮಶಾಸ್ತ್ರದ ಬಗ್ಗೆ ಮಾತಾಡಿದನು (ಮತ್ತಾಯ 5:17). ಆಗ ದಶಾಜ್ಞೆಗಳಲ್ಲಿ ಎರಡನ್ನು ಉಲ್ಲೇಖಿಸಿದನು: "ನರಹತ್ಯ ಮಾಡಬಾರದು," ಮತ್ತು "ವ್ಯಭಿಚಾರ ಮಾಡಬಾರದು" (ಮತ್ತಾಯ 5:21, 27). ತ್ಯಾಗಪತ್ರ, ಸುಳ್ಳಾಣೆಯಿಡುವುದು, ಆಣೆಗಳನ್ನು ನೆರವೇರಿಸುವುದು, "ಕಣ್ಣಿಗೆ ಪ್ರತಿಯಾಗಿ ಕಣ್ಣು ಮತ್ತು

ಹಲ್ಲಿಗೆ ಪ್ರತಿಯಾಗಿ ಹಲ್ಲು" ಮತ್ತು "ನಿನ್ನ ನೆರೆಯವನನ್ನು ಪ್ರೀತಿಸು" ಎಂಬವುಗಳನ್ನೂ ನಮೂದಿಸಿದನು (ಮತ್ತಾಯ 5:31, 33, 38, 43). ಧರ್ಮಶಾಸ್ತ್ರದ ದೊಡ್ಡ ಹಾಗೂ ಅತೀ ಮುಖ್ಯವಾದ ಆಜ್ಞೆಯು "ನಿನ್ನ ದೇವರಾದ ಕರ್ತನನ್ನು ನೀನು ಪ್ರೀತಿಸು" ಎಂಬುದು (ಮತ್ತಾಯ 22:37, 38) ದಶಾಜ್ಞೆಗಳಲ್ಲಿ ಕಂಡು ಬರುವದಿಲ್ಲ. ಸಬ್ಬತ್ತ ದಿನವಂದು ಪ್ರಾಣಿಗಳ ಯಜ್ಞವನ್ನು ಅರ್ಪಿಸುವದರಿಂದ (ಅರಣ್ಯಕಾಂಡ 28:9, 10) ಯಾಜಕರು ಸಬ್ಬತ್ ದಿನವನ್ನು ಆಚರಿಸದೆ ಧರ್ಮಶಾಸ್ತ್ರವನ್ನು ಮೀರುವುದಕ್ಕೆ ಅನುಮತಿ ಕೊಟ್ಟಿತೆಂದು ಯೇಸು ಹೇಳಿದನು (ಮತ್ತಾಯ 12:5). ಪೌಲನು ಧರ್ಮಶಾಸ್ತ್ರವನ್ನು ಉಲ್ಲೇಖಿಸಿದಾಗ ("ಆಶಿಸಬಾರದು" "ರೋಮಾಪುರ 7:7), ದಾಶಜ್ಞೆಗಳಿಗೆ ಸಂಬಂಧಿಸಿ ಹೇಳಿದನು. ಪ್ರೀತಿಯು; "ಧರ್ಮಶಾಸ್ತ್ರವನ್ನು" ನೆರವೇರಿಸುತ್ತದೆ ಎಂದು ಬರೆದನು, ಆಗ ದಶಾಜ್ಞೆಗಳಲ್ಲಿ ನಾಲ್ಕು ಆಜ್ಞೆಗಳನ್ನು ಉಲ್ಲೇಖಿಸುವದರಿಂದ "ಧರ್ಮಶಾಸ್ತ್ರ" ಎಂಬದರಿಂದ ಅವನಲ್ಲಿ ಯಾವ ಅರ್ಥವಿತ್ತೆಂದು ತೋರಿಸಿದನು (ರೋಮಾಪುರ 13:8, 9). "ಧರ್ಮಶಾಸ್ತ್ರ" ಎಂಬ ಪದ ಉಪಯೋಗಿಸಿದಾಗ ದಾಶಾಜ್ಞೆಗಳನ್ನು ಕೂಡಿಸಿದ್ದೆನೆಂದು ಯಾಕೋಬನೂ ಸಹ ತೋರಿಸಿದನು (ಯಾಕೋಬ 2:10, 11). ಯೇಸು ಮತ್ತು ಈ ಪ್ರೇರೇಪಿಸಲ್ಪಟ್ಟ ಬರಹಗಾರರು ಯಾವ ಭಿನ್ನತೆ ಮಾಡಲಿಲ್ಲ, ಆದರೆ ಹಳೇ ಒಡಂಬಡಿಕೆಯ ಯಾವುದೇ ಆಜ್ಞೆಯನ್ನು ಧರ್ಮಶಾಸ್ತ್ರದ ಭಾಗದಂತೆ ಯೋಚಿಸಿದರು.

ಯಾವುದೇ ಒಡಂಬಡಿಕೆಯಲ್ಲಿ "ಮೋಶೆಯ ಧರ್ಮಶಾಸ್ತ್ರ" ಮತ್ತು "ದೇವರ ಧರ್ಮಶಾಸ್ತ್ರ" ಎಂಬವುಗಳ ಮಧ್ಯದಲ್ಲಿ ಭಿನ್ನತೆ ಮಾಡಲ್ಪಟ್ಟಿಲ್ಲ. ಈ ಮಾತುಗಳು ಅದಲು ಬದಲಾಗಿ ಉಪಯೋಗಿಸಲ್ಪಟ್ಟಿವೆ (ಲೂಕ 2:22-24). ಧರ್ಮಶಾಸ್ತ್ರವು ದೇವರ ಧರ್ಮಶಾಸ್ತ್ರ ಎಂದು ಯೋಚಿಸಲ್ಪಟ್ಟಿದೆ, ಯಾಕಂದರೆ ಅದು ದೇವರಿಂದ ಪ್ರಾರಂಭಿಸಲ್ಪಟ್ಟಿತು ಆದರೆ ಮೋಶೆಯೊಂದಿಗೆ ಅಲ್ಲ. "ಮೋಶೆಯ ಧರ್ಮಶಾಸ್ತ್ರ ಗ್ರಂಥದಲ್ಲಿ" ಬರೆಯಲ್ಪಟ್ಟದ್ದು "ಕರ್ತನು" ಆಜ್ಞಾಪಿಸಿದ್ದು ಆಗಿರುತ್ತದೆ (2 ಅರಸುಗಳು 14:6). ಆದುದರಿಂದಲೇ ಸೊಲೊಮೋನನು, "ನನ್ನ ದೇವರಾದ ಯೆಹೋವನ ಕಟ್ಟಳೆ ಯನ್ನು ಕೈಕೊಂಡು ಆತನ ಮಾರ್ಗದಲ್ಲೇ ನಡೆದುಕೋ; ಮೋಶೆಯ ಧರ್ಮಶಾಸ್ತ್ರದಲ್ಲಿ ಬರೆದಿರುವ ಆತನ ಆಜ್ಞಾ ನಿಯಮ ವಿಧಿನಿರ್ಣಯಗಳನ್ನು ಪಾಲಿಸು" ಎಂದು ಹೇಳಿ ದನು (1 ಅರಸುಗಳು 2:3; ನೋಡಿರಿ 2 ಪೂರ್ವಕಾಲವೃತ್ತಾಂತ 33:8). ಈ ನಿಯಮಗಳು "ಮೋಶೆಯಿಂದ ಕೊಡಲ್ಪಟ್ಟ ಕರ್ತನ ಧರ್ಮಶಾಸ್ತ್ರದ ಪುಸ್ತಕದಲ್ಲಿ" ಒಳಗೊಂಡಿರುತ್ತವೆ (2 ಪೂರ್ವಕಾಲವೃತ್ತಾಂತ 34:14). "ಧರ್ಮಶಾಸ್ತ್ರದ ಪುಸ್ತಕವು" (2 ಅರಸು ಗಳು 22:11) "ನಿಬಂಧನ ಗ್ರಂಥ" ಎಂದು ಕರೆಯಲ್ಪಟ್ಟಿದೆ (2 ಅರಸುಗಳು 23:2).

ಎಜ್ರನು, "ಇಸ್ರಾಯೇಲ ದೇವರಾದ ಯೆಹೋವನಿಂದ ದೊರಕಿದ ಮೋಶೆಯ ಧರ್ಮೋಪದೇಶದಲ್ಲಿ ಪಾರಂಗತನಾದ ಶಾಸ್ತ್ರಿಯಾಗಿದ್ದನು" (ಎಜ್ರ 7:6), "ಇಸ್ರಾಯೇ ಲ್ಯರಿಗೆ ಕರ್ತನು ಕೊಟ್ಟ ಮೋಶೆಯ ಧರ್ಮಶಾಸ್ತ್ರದ ಪುಸ್ತಕವನ್ನು ತರಬೇಕೆಂದು" ಅರಸನು ಅವನನ್ನು ಕೇಳಿದನು. ಅನಂತರ ಈ ಹೇಳಿಕೆ ಕೊಡಲ್ಪಟ್ಟಿತು: "ದೇವರ ಧರ್ಮಶಾಸ್ತ್ರದಿಂದ ಅವರು ಓದಿದರು" (ನೆಹಮೀಯ 8:1, 8; ನೋಡಿರಿ ವಚನಗಳು 14, 18; 10:29, 34). ಈ ವಚನಗಳಲ್ಲಿ ನೋಡುವಂತೆ ಮೋಶೆಯ ಧರ್ಮಶಾಸ್ತ್ರ ಮತ್ತು ದೇವರ ಧರ್ಮಶಾಸ್ತ್ರ ಒಂದೇಯಾಗಿರುತ್ತದೆ.

ಹೊಸ ಒಡಂಬಡಿಕೆಯು "ಮೊದಲನೆಯ" ಇಲ್ಲವೇ "ಹಳೆಯ" ಒಡಂಬಡಿಕೆಗೆ ಉಲ್ಲೇಖಿಸುವಾಗ, ಯಾವಾಗಲೂ ದಶಾಜ್ಞೆಗಳು ಒಳಗೊಂಡಿರುತ್ತವೆ. "ಮೋಶೆಯ ಧರ್ಮಶಾಸ್ತ್ರ ಗ್ರಂಥ," "ದೇವರ ಧರ್ಮಶಾಸ್ತ್ರ ಗ್ರಂಥ," ಮತ್ತು "ಒಡಂಬಡಿಕೆಯ

ಗ್ರಂಥ" ಎಂಬವುಗಳು ಮೂರು ಭಿನ್ನವಾದ ಪುಸ್ತಕಗಳಾಗಿರುವದಿಲ್ಲ. ಅದೇ ರೀತಿಯಲ್ಲಿ, "ಮೋಶೆಯ ಧರ್ಮಶಾಸ್ತ್ರ" ಮತ್ತು "ದೇವರ ಧರ್ಮಶಾಸ್ತ್ರ" ಎರಡು ಭಿನ್ನವಾದ ನಿಯಮಗಳಾಗಿರುವದಿಲ್ಲ, ಆದರೆ ಒಂದೇ ಯಾಗಿರುತ್ತವೆ. ದಶಾಜ್ಞೆಗಳು ಹಾಗೂ ಮೋಶೆಯ ಮುಖಾಂತರ ದೇವರು ಕೊಟ್ಟ ಧರ್ಮಶಾಸ್ತ್ರದ ಉಳಿದ ಭಾಗವನ್ನೊಳಗೊಂಡ ಧರ್ಮಶಾಸ್ತ್ರವು ದೇವರು ಮೋಶೆಗೆ ಆಜ್ಞಾಪಿಸಿದ ಪ್ರತಿಯೊಂದನ್ನೂ ಒಳಗೊಂಡಿರುತ್ತದೆ. ಇದು ಸತ್ಯವಾಗಿದ್ದು, ಎಲ್ಲಾ ವಿಷಯಗಳಲ್ಲಿ "ಒಡಂಬಡಿಕೆ" ಎಂಬ ಪದವು ಉಪಯೋಗಿಸಲ್ಪಡದಿದ್ದರೂ ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳು ಹೋಲಿಸಲ್ಪಡಬಹುದು.

ಒಡಂಬಡಿಕೆಗಳು ಹೋಲಿಸಲ್ಪಡುವಾಗ ಪ್ರತಿಯೊಂದರ ಭಿನ್ನತೆಯ ಸ್ವಭಾವವು ಸ್ಪಷ್ಟವಾಗುವುದು. ದೇವರು ಮತ್ತು ಇಸ್ರಾಯೇಲ ಜನಾಂಗದ ಮಧ್ಯದಲ್ಲಿ ಆದ ಒಡಂಬಡಿಕೆಯು ಮೋಶೆಯಿಂದಾದ ಮಧ್ಯಸ್ತಗಾರಿಕೆಯ ಒಪ್ಪಂದವಾಗಿತ್ತು. ಅದರ ಅಧೀನತೆಯಲ್ಲಿ ಆಶೀರ್ವದಿಸಲ್ಪಟ್ಟವರು ಸುನ್ನತಿಯಿಂದ ಮುದ್ರಿಸಲ್ಪಟ್ಟವರಾಗಿದ್ದರು ಮತ್ತು ಒಡಂಬಡಿಕೆಗೆ ವಿಧೇಯರಾಗಿದ್ದರು. ಎರಡನೆಯ ಒಡಂಬಡಿಕೆಯು ಎಲ್ಲಾ ಜನರಿಗೋಸ್ಕರವಾಗಿ ಯೇಸುವಿನ ಮಧ್ಯಸ್ತಿಕೆಯಿಂದ ಮಾಡಲ್ಪಟ್ಟಿತ್ತು. ಈ ಒಡಂಬಡಿಕೆಯಿಂದ ಲಾಭಪಡೆಯಲು, ದೇವರಿಂದ ಹುಟ್ಟಲ್ಪಡಬೇಕು, ಪರಿಶುದ್ಧಾತ್ಮನಿಂದ ಮುದ್ರಿಸಲ್ಪಡಬೇಕು ಮತ್ತು ನೂತನ ಜೀವಿತ ಜೀವಿಸಬೇಕು.

ಎರಡು ಒಡಂಬಡಿಕೆಗಳನ್ನು ಯೋಚಿಸುವಲ್ಲಿ, ಯೇಸುವು ಮಧ್ಯಸ್ಥಗಾರನಾಗಿದ್ದ ಒಡಂಬಡಿಕೆಯ ಬಗ್ಗೆ ಇಬ್ರಿಯರಿಗೆ ಬರೆದವನು ಈ ಹೇಳಿಕೆ ಕೊಟ್ಟಿದ್ದಾನೆ: "ಆದರೆ ಯೇಸು ಅದಕ್ಕಿಂತ ಶ್ರೇಷ್ಠವಾದ ಯಾಜಕೋದ್ಯೋಗವನ್ನು ಹೊಂದಿದವನಾಗಿದ್ದಾನೆ; ಉತ್ತಮ ವಾಗ್ದಾನಗಳ ಮೇಲೆ ಸ್ಥಾಪಿತವಾದ ಉತ್ತಮವಾದ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ" (ಇಬ್ರಿಯ 8:6).

## ಎರಡು ಒಡಂಬಡಿಕೆಗಳ ಒಂದು ಹೋಲಿಕೆ

| ಹಳೇ ಒಡಂಬಡಿಕೆ | ಹೊಸ ಒಡಂಬಡಿಕೆ |
|---|---|
| 1. *ದೇವರು* ಮೊದಲನೆಯ ಒಡಂಬಡಿಕೆಯನ್ನು ಮಾಡಿಕೊಂಡನು (ಧರ್ಮೋಪದೇಶಕಾಂಡ 5:2). | 1. *ದೇವರು* ಹೊಸ ಒಡಂಬಡಿಕೆಯನ್ನು ಸಹ *ಮಾಡಿಕೊಂಡನು* (ಯೆರೆಮೀಯ 31:31ಎ). |
| 2. ಇದು *ಇಸ್ರಾಯೇಲ್ಯರು ಐಗುಪ್ತನ್ನು ಬಿಟ್ಟಾಗ* ಜಾರಿಯಲ್ಲಿ ಬಂದಿತು. "ಯೆಹೋವನು ಐಗುಪ್ತದಿಂದ ಬಂದ ಇಸ್ರಾಯೇಲ್ಯರೊಡನೆ … ಒಡಂಬಡಿಕೆ ಮಾಡಿಕೊಂಡನು" (1 ಅರಸುಗಳು 8:9ಬಿ). | 2. ಯೇಸುವು *ಶಿಲುಬೆಯ ಮೇಲೆ ಮರಣಹೊಂದಿದಾಗ* ಇದು ಜಾರಿಯಲ್ಲಿ ಬಂದಿತು. "ಮರಣ ಶಾಸನವು ಇರುವಲ್ಲಿ ಅದನ್ನು ಬರೆಯಿಸಿದವನ ಮರಣವು ಪ್ರಸಿದ್ಧವಾಗಿರಬೇಕಷ್ಟೆ. ಮರಣ ಶಾಸನವು ಮರಣವಾದ ಮೇಲೆ ನಡೆಯುವುದೇ ಹೊರತು ಬರೆಯಿಸಿದವನು ಜೀವದಿಂದಿರುವಾಗ ಎಂದಿಗೂ ಸಲ್ಲುವುದಿಲ್ಲ" (ಇಬ್ರಿಯ 9:16, 17ಎ). |
| 3. ಮೋಶೆಯು *ಮಧ್ಯಸ್ಥಗಾರನಾಗಿದ್ದನು* (ಧರ್ಮೋಪದೇಶಕಾಂಡ 5:5ಎ). | 3. ಯೇಸುವು *ಮಧ್ಯಸ್ಥಗಾರನಾಗಿದ್ದಾನೆ* (ಇಬ್ರಿಯ 12:22-24ಎ). |
| 4. ಮೊದಲನೆಯದು *ಪ್ರಾಣಿಗಳ ರಕ್ತದಿಂದ* | 4. ಎರಡನೆಯದು ಯೇಸುವಿನ |

| | |
|---|---|
| *ಪ್ರತಿಷ್ಠಿಸಲ್ಪಟ್ಟಿತು.* “ಆಗ ಮೋಶೆ ರಕ್ತವನ್ನು ತೆಗೆದುಕೊಂಡು ಜನರ ಮೇಲೆ ಚಿಮುಕಿಸಿ - ಇಗೋ, ಈ ಗ್ರಂಥದಲ್ಲಿ ಹೇಳಿರುವ ಎಲ್ಲಾ ಆಜ್ಞೆಗಳ ಪ್ರಕಾರ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತವು ಇದೇ ...” (ವಿಮೋಚನಕಾಂಡ 24:8). | ರಕ್ತದಿಂದ ಪ್ರತಿಷ್ಠಿಸಲ್ಪಟ್ಟಿತು. “ಆಮೇಲೆ ಪಾತ್ರೆಯನ್ನು ತೆಗೆದುಕೊಂಡು ಸ್ತೋತ್ರ ಮಾಡಿ ಅವರಿಗೆ ಕೊಟ್ಟು - ಇದರಲ್ಲಿರುವದನ್ನು ಎಲ್ಲರೂ ಕುಡಿಯಿರಿ; ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ; ...” ಎಂದು ಹೇಳಿದನು (ಮತ್ತಾಯ 26:27, 28ಎ). |
| 5. ಮೊದಲನೆಯದು *ಇಸ್ರಾಯೇಲ್ಯರೊಂದಿಗೆ* ಮಾಡಲ್ಪಟ್ಟಿತು (1 ಅರಸುಗಳು 8:9). | 5. ಎರಡನೆಯದು *ಎಲ್ಲಾ* ಜನರಿಗಾಗಿ ಮಾಡಲ್ಪಟ್ಟಿತು (ಮಾರ್ಕ 16:15). |
| 6. ಇಸ್ರಾಯೇಲ್ಯರಿಗಾಗಿ ಅಗತ್ಯತೆಯು, *ಧರ್ಮಶಾಸ್ತ್ರದ ಆಜ್ಞೆಗಳನ್ನು* ಕೈಕೊಳ್ಳುವದಕ್ಕಾಗಿತ್ತು. “ನೀವು ಅನುಸರಿಸಬೇಕೆಂದು ಆತನು ನೇಮಿಸಿದ ನಿಬಂಧನೆಯನ್ನು ಅಂದರೆ ಹತ್ತು ಕಟ್ಟಳೆಗಳನ್ನು ...” (ಧರ್ಮೋಪದೇಶಕಾಂಡ 4:13, 14). | 6. ಎಲ್ಲಾ ಜನರ ಅಗತ್ಯತೆಗೆ *ಯೇಸುವಿನ ಆಜ್ಞೆಗಳು.* “ನಾನು ನಿಮಗೆ ಆಜ್ಞಾಪಿಸಿದ್ದೆಲ್ಲವನ್ನು ಕೈಕೊಳ್ಳುವಂತೆ ಅವರಿಗೆ ಬೋಧಿಸಿ” ತನ್ನ ಹಿಂಬಾಲಕರೆಲ್ಲರೂ ಎಲ್ಲಾ ಜನಾಂಗಗಳವರನ್ನು ಶಿಷ್ಯರನ್ನಾಗಿ ಮಾಡಬೇಕೆಂದು ಯೇಸು ಹೇಳಿದನು (ಮತ್ತಾಯ 28:19, 20ಎ). |
| 7. ವಿಧೇಯತೆಗಾಗಿ ಆಶೀರ್ವಾದವಾಗಿತ್ತು ಇಸ್ರಾಯೇಲ್ಯರ ದೇಶದಲ್ಲಿ ಸಮೃದ್ಧಿಯೊಂದಿಗೆ ದೀರ್ಘಾಯುಷ್ಯ. “ನೀವು ಸ್ವತಂತ್ರಿಸಿಕೊಳ್ಳುವ ದೇಶದಲ್ಲಿ ಬಹುಕಾಲ ಶುಭವುಳ್ಳವರಾಗಿ ಬದುಕಿಕೊಳ್ಳುವಂತೆ ನಿಮ್ಮ ದೇವರಾದ ಯೆಹೋವನು ಆಜ್ಞಾಪಿಸಿದ ಮಾರ್ಗದಲ್ಲೇ ನಡೆಯಬೇಕು” (ಧರ್ಮೋಪದೇಶಕಾಂಡ 5:33). | 7. ಈ ಜೀವನದಲ್ಲಿ ಮತ್ತು ಬರುವ ಜೀವನದಲ್ಲಿ ದೇವರ ಪರಾಮ್ಮರಿಸುವಿಕೆ, ಪರಲೋಕದಲ್ಲಿ ನಿತ್ಯಜೀವ ವಿಧೇಯತೆಗಾಗಿ ಆಶೀರ್ವಾದಗಳಾಗಿವೆ. “ದೇವರು ... ನಮ್ಮನ್ನು ತಿರಿಗಿ ಜೀವಿಸುವಂತೆ ಮಾಡಿ ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿ ನಮ್ಮನ್ನು ಲಯ ಕಳಂಕ ಕ್ಷಯಗಳಿಲ್ಲದ ಬಾಧ್ಯತೆಯನ್ನು ಎದುರು ನೋಡುವವರನ್ನಾಗಿ ಮಾಡಿದನು” (1 ಪೇತ್ರ 1:3, 4). |
| 8. ಲೌಕಿಕ ಶಾಪಗಳೂ ಅಂತ್ಯದಲ್ಲಿ ದೇಶದೊಳಗಿಂದ ಸೆರೆಗೆ ಒಯ್ಯಲ್ಪಡುವುದೂ ಅವಿಧೇಯತೆಗೆ ಶಿಕ್ಷೆಯಾಗಿತ್ತು. ಅವರು ಆತನಿಗೆ ವಿಧೇಯರಾಗದಿದ್ದರೆ, ಆದರೆ ಆತನ ಒಡಂಬಡಿಕೆಯನ್ನು ಮುರಿದರೆ, ಅವರನ್ನು ಕಠಿಣವಾಗಿ ಶಿಕ್ಷಿಸುವೆನೆಂದು ದೇವರು ಹೇಳಿದನು (ಯಾಜಕಕಾಂಡ 26:14-33). ಅವರು ಬದಲಾಗದಿದ್ದರೆ, ಇಸ್ರಾಯೇಲ್ಯರು ಜನಾಂಗಗಳಲ್ಲಿ ಚದರಿಸಲ್ಪಡುವರೆಂದು ಆತನು ಹೇಳಿದನು (ಯಾಜಕಕಾಂಡ 26:33). | 8. *ನರಕದಲ್ಲಿ* ನಿತ್ಯಯಾತನೆ ಅವಿಧೇಯತೆಗೆ ಶಿಕ್ಷೆಯಾಗಿದೆ. “ಅಂಥವರ ಯಾತನೆಯ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ ... ಹಗಲಿರುಳು ಉಪಶಮನವಿಲ್ಲದೆ ಯಾತನೆ ಪಡುವರು” (ಪ್ರಕಟನೆ 14:11). “ಇವರು ನಿತ್ಯ ಶಿಕ್ಷೆಗೆ ಹೋಗುವರು” (ಮತ್ತಾಯ 25:46ಎ). |

| | |
|---|---|
| 9. ಒಳಗೊಂಡಿರುವವರು *ಇಸ್ರಾಯೇಲ್ಯರಾಗಿದ್ದರು* (1 ಅರಸುಗಳು 8:9). ಅವರು ಇಸ್ರಾಯೇಲ ಎಂದು ಹೆಸರು ಬದಲಾದ ಯಾಕೋಬನ ವಂಶಜರಾಗಿದ್ದರು (ಆದಿಕಾಂಡ 32:28ಎ). | 9. ಒಳಗೊಂಡವರು *ದೇವರ ಮಕ್ಕಳಾಗಿದ್ದರು*. “ನಾವು ದೇವರ ಮಕ್ಕಳಾಗಿದ್ದೇವೆ ಮತ್ತು ಮಕ್ಕಳಾಗಿದ್ದರೆ, ಬಾಧ್ಯಸ್ಥರಾಗಿದ್ದೇವೆ, ಮತ್ತು ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು” (ರೋಮಾಪುರ 8:16ಬಿ, 17). |
| 10. *ದೈಹಿಕ ಜನನದಿಂದ* ಅವರು ಮಕ್ಕಳಾದರು. “ಅವರು ಇಸ್ರಾಯೇಲಿನ ವಂಶದವರೂ ದೇವರು ಪುತ್ರರಾಗಿ ಸ್ವೀಕರಿಸಿದವರೂ ಆಗಿದ್ದಾರೆ” (ರೋಮಾಪುರ 9:3ಬಿ, 4ಎ). | 10. ಇವರು ಆತ್ಮಿಕ *ಜನನದಿಂದ* ಮಕ್ಕಳಾಗಿದ್ದಾರೆ. “ಆ ಮಾತಿನ ಅರ್ಥವೇನಂದರೆ ಶರೀರ ಸಂಬಂಧವಾಗಿ ಹುಟ್ಟಿದವರೆಲ್ಲರೂ ದೇವರ ಮಕ್ಕಳಲ್ಲ, ವಾಗ್ದಾನ ಸಂಬಂಧವಾಗಿ ಹುಟ್ಟಿದವರೇ ವಂಶಜರೆಂದು ಎಣಿಸಲ್ಪಡುವರು” (ರೋಮಾಪುರ 9:8). ವಾರಸುದಾರರು “ರಕ್ತಸಂಬಂಧದಿಂದಾಗಲಿ, ದೈಹಿಕ ಇಚ್ಛೆಯಿಂದಾಗಲಿ, ಪುರುಷ ಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು” (ಯೋಹಾನ 1:13; ನೋಡಿರಿ ಗಲಾತ್ಯ 3:26, 27). |
| 11. *ಸುನ್ನತಿಯು* ಪುತ್ರತ್ವದ ಸಂಕೇತ ಮತ್ತು ಮುದ್ರೆಯಾಗಿತ್ತು. “ನೀವು ಮಾನಸ್ಥಾನದಲ್ಲಿ ಸುನ್ನತಿ ಮಾಡಿಸಿಕೊಳ್ಳಬೇಕು; ಅದೇ ನಿಮಗೂ ನನಗೂ ಉಂಟಾದ ಒಡಂಬಡಿಕೆಗೆ ಗುರುತು” (ಆದಿಕಾಂಡ 17:11). | 11. *ಪರಿಶುದ್ಧಾತ್ಮನೆಂಬ* ವರವು ಮುದ್ರೆಯಾಗಿತ್ತು. “ಆತನು ನಮ್ಮ ಮೇಲೆ ಮುದ್ರೆ ಹಾಕಿ ನಮ್ಮ ಹೃದಯಗಳಲ್ಲಿ ಪರಿಶುದ್ಧಾತ್ಮನನ್ನು ಸಂಚಕರವಾಗಿ ಅನುಗ್ರಹಿಸಿದ್ದಾನೆ” (2 ಕೊರಿಂಥ 1:21, 22). “ನೀವು ಸಹ ವಾಗ್ದಾನ ಮಾಡಲ್ಪಟ್ಟ ಪರಿಶುದ್ಧಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. … ಪರಿಶುದ್ಧಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ” (ಎಫೆಸ 1:13ಬಿ, 14ಎ; ನೋಡಿರಿ ಗಲಾತ್ಯ 4:6). |
| 12. ಮೊದಲನೆಯದು ಮರಣ ಮತ್ತು ದಂಡನೆಯ ಕಾರ್ಯ ಮಾಡುವದಾಗಿತ್ತು. “ಮರಣವಿಧಿಸುವ ನಿಯಮದ ಸೇವೆಯು ಕಲ್ಲಿನ ಮೇಲೆ ಲಿಖಿತವಾದ ಅಕ್ಷರಗಳಲ್ಲಿ ಆಧಾರಗೊಂಡಿದ್ದರೂ ಪ್ರಭಾವದಿಂದ ಕೂಡಿತ್ತು … .” “ಅಪರಾಧ ನಿರ್ಣಯಕ್ಕೆ ಸಾಧನವಾಗಿರುವ | 12. ಎರಡನೆಯದು, *ನೀತಿ ಮತ್ತು ಆತ್ಮನ* ಕಾರ್ಯಮಾಡುವುದಾಗಿದೆ. “ದೇವರಾತ್ಮ ಸಂಬಂಧವಾದ ಸೇವೆಯು ಎಷ್ಟೋ ಹೆಚ್ಚಾಗಿ ಪ್ರಭಾವವುಳ್ಳದ್ದಾಗಿರಬೇಕು? … ನೀತಿ ಸಾಧನವಾಗಿರುವ ಸೇವೆಯು ಎಷ್ಟೋ ಅಧಿಕವಾದ ಪ್ರಭಾವವುಳ್ಳದ್ದಾಗಿರಬೇಕು” (2 ಕೊರಿಂಥ 3:8, 9). |

ಸೇವೆಯು ಪ್ರಭಾವದಿಂದಿರುತ್ತದೆ
..." (2 ಕೊರಿಂಥ 3:7, 9ಎ).

## ಒಂದು ಹೆಚ್ಚು ಉತ್ತಮವಾದ ಒಡಂಬಡಿಕೆ

ಮೊದಲನೆಯ ಒಡಂಬಡಿಕೆಯು ನ್ಯಾಯತೀರ್ಪು ಕೊಡಬೇಕಾದ (ಯಾಜಕಕಾಂಡ 19:15) ಮತ್ತು ಸಮಾಜದಿಂದ ದಂಡಿಸಬೇಕಾದ ಕಾರ್ಯಗಳನ್ನು (ಅರಣ್ಯಕಾಂಡ 15:30, 31) ನಡಿಸಿತು. ಅದರ ಆಜ್ಞೆಗಳು ಜನರ ಒಂದು ದೇಶಕ್ಕಾಗಿ ಇದ್ದವು; ದೇವರ ಕಡೆಗೆ ಮತ್ತು ಇತರರ ಕಡೆಗೆ ಹೇಗೆ ನಡೆದುಕೊಳ್ಳಬೇಕೆಂಬದನ್ನು ತಿಳಿದುಕೊಳ್ಳಲು ಸಹಾಯ ಮಾಡುವದಕ್ಕೆ ಕೊಡಲ್ಪಟ್ಟಿದ್ದವು. ಎರಡನೆಯದು ದೇವರೊಂದಿಗೆ ಮತ್ತು ಇತರರೊಂದಿಗೆ ಇರುವ ನಮ್ಮ ಸಂಬಂಧದಲ್ಲಿ ನಾವು ಹೇಗೆ ವರ್ತಿಸಬೇಕೆಂಬುದರ ಪರಿಣಾಮ ಮಾಡುವ ಹೃದಯದ ಸಂಗತಿಗಳನ್ನು ನಡಿಸುತ್ತದೆ. ಈ ಒಡಂಬಡಿಕೆಯ ಅಧೀನತೆಯಲ್ಲಿ ನ್ಯಾಯತೀರ್ಪು (ಮತ್ತಾಯ 7:1) ಮತ್ತು ದಂಡನೆಯು ದೇವರಿಗೆ ಬಿಟ್ಟುಕೊಡಲ್ಪಟ್ಟಿದೆ (ರೋಮಾಪುರ 12:19; 2 ಥೆಸಲೊನೀಕ 1:7, 8). ದೇವರು ಮಾತ್ರವೇ ಹೃದಯವನ್ನು ಬಲ್ಲಾತನಾಗಿರುತ್ತಾನೆ (1 ಸಮುವೇಲ 16:7).

ಮೊದಲನೆಯದು ಪಾಪಭರಿತ ಮನುಷ್ಯನಿಗಾಗಿ ಏನು ಮಾಡಬೇಕು, ಏನು ಮಾಡಬಾರದು ಎಂಬ ವಿಷಯದಲ್ಲಿ ಬಲಹೀನವಾಗಿತ್ತು. ಎರಡನೆಯದು ಯೇಸುವಿನ ಬಲದ ಮುಖಾಂತರ ಅವಶ್ಯವಾದ ಎಲ್ಲವನ್ನೂ ಮಾಡಬಹುದು. "ಧರ್ಮಶಾಸ್ತ್ರವು ನಮ್ಮ ಶರೀರಾಧೀನ ಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೇ ಇತ್ತೋ ಅದನ್ನು ದೇವರೇ ಮಾಡಿದನು. ಏನಂದರೆ ಆತನು ಪಾಪ ನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು" (ರೋಮಾಪುರ 8:3).

## ಒಂದು ಹೆಚ್ಚು ಉತ್ತಮವಾದ ಉದ್ದೇಶ

ದೇವರು ದೋಷವುಳ್ಳ ಒಂದು ಒಡಂಬಡಿಕೆಯನ್ನು ಕೊಟ್ಟನೋ? (ನೋಡಿರಿ ಇಬ್ರಿಯ 8:7). ದೇವರ ದೃಷ್ಟಿಕೋನದಿಂದ ಆತನು ಯಾವ ಉದ್ದೇಶಕ್ಕಾಗಿ ಮಾಡಿದನೋ ಅದಕ್ಕಾಗಿ ಪರಿಪೂರ್ಣವಾದದ್ದಾಗಿತ್ತು, ಧರ್ಮಶಾಸ್ತ್ರದ ಮುಖಾಂತರ, ಮನುಷ್ಯನಿಗೆ ಪಾಪವು ಏನಾಗಿದೆ ಎಂಬುದನ್ನು (ನೋಡಿರಿ ರೋಮಾಪುರ 7:7) ಹಾಗೂ ಯಾವುದು ಪಾಪಭರಿತವಾದದ್ದಾಗಿದೆ ಎಂಬುದನ್ನು (ರೋಮಾಪುರ 7:13) ತೋರಿಸುವ ಅಳತೆ ಗೋಲನ್ನು ದೇವರು ಕೊಟ್ಟನು. "ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ" (ರೋಮಾಪುರ 3:20ಬಿ). ಈ ರೀತಿಯಲ್ಲಿ ಪಾಪವು ತನ್ನ ಸ್ವಭಾವಕ್ಕೆ ಹೇಗೆ ವಿರುದ್ಧವಾದದ್ದಾಗಿದೆ ( ರೋಮಾಪುರ 3:23), ಅದು ಹೇಗೆ ಆತನ ಚಿತ್ತವನ್ನು ಮೀರುತ್ತದೆ (ರೋಮಾಪುರ 4:15) ಮತ್ತು ಅದೆಷ್ಟು ಪಾಪಭರಿತವಾದದ್ದಾಗಿದೆ (ರೋಮಾಪುರ 7:13) ಎಂಬುದನ್ನು ದೇವರು ಪ್ರಕಟಿಸಿದನು. ಧರ್ಮಶಾಸ್ತ್ರವು ಪಾಪಕ್ಕೆ ವಿಘ್ನಕಾರಿಯಾಗುವ ಮಟ್ಟವಾಗಿ ಧರ್ಮಶಾಸ್ತ್ರವು ಕೊಡಲ್ಪಟ್ಟಿತು. "ಅಪರಾಧಗಳ ನಿಮಿತ್ತವಾಗಿ ಅದು ಕೊಡಿಸಲ್ಪಟ್ಟಿತು" (ಗಲಾತ್ಯ 3:19). ದೇವರ ಯೋಜಿತ ರಕ್ಷಕನ ಮುಖಾಂತರ ಅಂಥ ದಂಡನೆಯಿಂದ ಮಾನವ ಕುಲವು ಬಿಡುಗಡೆ ಹೊಂದುವವರೆಗೆ ಅದರ ಮುಖಾಂತರ

ಎಲ್ಲಾ ಜನರು ಪಾಪದ ಕೆಳಗೆ ಮುಚ್ಚಿಡಲ್ಪಟ್ಟರು (ಗಲಾತ್ಯ 3:22).

ಸಂತತಿಯು, ಯೇಸುವು ಬರುವವರೆಗೆ (ಗಲಾತ್ಯ 3:19) ಧರ್ಮಶಾಸ್ತ್ರವು ನಮ್ಮನ್ನು ವಶದಲ್ಲಿಟ್ಟುಕೊಳ್ಳುವ ಕಾವಲುಗಾರನಂತೆ ಇಲ್ಲವೇ ಮನೇ ಬೋಧಕನಂತೆ ಇರಲು ಕೊಡಲ್ಪಟ್ಟಿತು (ಗಲಾತ್ಯ 3:23, 24). ಈಗ ಯೇಸು ಬಂದದ್ದರಿಂದ, ಧರ್ಮಶಾಸ್ತ್ರವು ತನ್ನ ಉದ್ದೇಶವನ್ನು ನೆರವೇರಿಸಿದೆ, ನಾವಿನ್ನು ಬೋಧಕನ, ಕಾವಲುಗಾರನ ಅಧೀನತೆಯಲ್ಲಿ ಇರುವವರಲ್ಲ (ಗಲಾತ್ಯ 3:25).

ಒಂದು ಅರ್ಥದಲ್ಲಿ ಧರ್ಮಶಾಸ್ತ್ರವು ತಪ್ಪಿಲ್ಲದ್ದಾಗಿ ಇರಲಿಲ್ಲ (ಇಬ್ರಿಯ 8:7), ಯಾಕಂದರೆ ಅದು ಪಾಪಭರಿತ ಮನುಷ್ಯನನ್ನು ಪರಿಪೂರ್ಣವಾದವನನ್ನಾಗಿ ಮಾಡುವದಿಲ್ಲ (ಇಬ್ರಿಯ 7:19ಎ). ಒಂದು ಮಟ್ಟವಾಗಿ ಧರ್ಮಶಾಸ್ತ್ರವು ಯಾವುದೇ ಅತಿಕ್ರಮಣವಿಲ್ಲದೆ ಸಂಪೂರ್ಣ ವಿಧೇಯತೆಯನ್ನು ಕೇಳಿತು (ಗಲಾತ್ಯ 3:10; ಯಾಕೋಬ 2:10) ಪಾಪಭರಿತ ತಪ್ಪುಗಳನ್ನು ಮಾಡದೆ ನಾವು ಜೀವಿಸಲಾರೆವು ಎಂಬುದನ್ನು ಈ ಮಟ್ಟವು ಪ್ರಕಟಿಸಿತು. ನಾವು ರಕ್ಷಕನ ಅವಶ್ಯಕತೆಯಲ್ಲಿ ಇರುವ ಪಾಪಿಗಳಾಗಿದ್ದೇವೆಂದು ನಮಗೆ ತೋರಿಸಿ ಅದು ಬೋಧಕನಂತೆ ತನ್ನ ಉದ್ದೇಶ ಸಾಧಿಸಿತು (ಗಲಾತ್ಯ 3:25).

ಧರ್ಮಶಾಸ್ತ್ರದ ಉದ್ದೇಶವನ್ನು ಈ ರೀತಿಯಲ್ಲಿ ವಿವರಿಸಬಹುದು. ಫ್ಲೋರಿಡಾದಲ್ಲಿ ವಾಸವಾಗಿದ್ದ ಒಬ್ಬ ಮನುಷ್ಯನು ಒಂದು ಬೇಸಿಗೆ ಕಾಲದಲ್ಲಿ ಕ್ಯಾನಡಾದಲ್ಲಿದ್ದ ತನ್ನ ಸ್ನೇಹಿತನನ್ನು ಸಂದರ್ಶಿಸಿದನು. ಅವನು ಆ ಪ್ರದೇಶವನ್ನು ಬಹಳವಾಗಿ ಮೆಚ್ಚಿಕೊಂಡು, ಫ್ಲೋರಿಡಾದಲ್ಲಿಯಂತೆ ತಾನು ಕ್ಯಾನಡಾಕ್ಕೆ ವಲಸೆ ಬಂದು ಪೈನಾಪಲ; ತೋಟ ಬೆಳಸು ವೆನೆಂದು ಹೇಳಿದನು. ಅಂಥ ಪ್ರಯತ್ನವು ವ್ಯರ್ಥವಾಗುವುದೆಂದು ಅವನ ಸ್ನೇಹಿತನು ಅವನ ಮನಸ್ಸನ್ನು ಬದಲಾಯಿಸಲಿಕ್ಕಾಗಲಿಲ್ಲ. ಆದುದರಿಂದ ಕ್ಯಾನಡಾದ ಅತಿ ಉಷ್ಣ ವಾದ ದಕ್ಷಿಣದ ಇಳುಕಲಿನ ಪ್ರದೇಶದಲ್ಲಿ ಅಂಥ ತೋಟ ಮಾಡಲು ಪ್ರೋತ್ಸಾಹಿಸಿದನು. ಮೊದಲನೆಯ ಚಳಿಗಾಲದಲ್ಲಿ ಹಿಮವು ಬೇಗನೇ ಬಿತ್ತು; ಪೈನಾಪಿಲ್ ಯಾವುದೇ ಫಲಬಿಡುವ ಮೊದಲೇ ಹಿಮಬಿದ್ದಿತು; ಆ ವರ್ಷ ಹಿಮಬೇಗನೇ ಬಂದಿತು ಆದರೆ ಮುಂದಿನ ವರ್ಷ ತಡವಾಗಿ ಬೀಳುವುದೆಂದು ಹೇಳಿಕೊಂಡನು. ಅವನು ಮುಂದಿನ ವರ್ಷ ಪ್ರಯತ್ನಿಸಿದನು, ಅದೇ ಪರಿಣಾಮ. ಅಂತಿಮವಾಗಿ, ಹತ್ತು ವರ್ಷ ಪ್ರಯತ್ನಿಸಿದನು, ಅದೇ ಪರಿಣಾಮ, ಅಂತಿಮವಾಗಿ, ಹತ್ತು ವರ್ಷ ಪ್ರಯತ್ನಿಸಿದ ನಂತರ, ಅಲ್ಲಿಯ ಹವಾಮಾನವು ಪೈನಾಪಲ್ ಸಸಿಗಳು ಫಲವನ್ನು ಬಿಡುವಂತೆ ಮಾಡುವದಿಲ್ಲ ಎಂದು ಅವನು ಒಪ್ಪಿಕೊಂಡನು.

ನಂಬಿಕೆಯ ನೀತಿವಂತ ಮನುಷ್ಯನಾದ. ಅಬ್ರಹಾಮನನ್ನು ದೇವರು ಆಯ್ದುಕೊಂಡನು, ಮತ್ತು ಅವನನ್ನೂ ಅವನ ವಂಶಜರನ್ನೂ ಅವರ ಸುತ್ತಲಿನ ದುಷ್ಟ ಲೋಕದಿಂದ ಪ್ರತ್ತೇಕವಾಗಿ ಇಟ್ಟನು. ಅವರನ್ನು ಆಳಿ ನಡಿಸಲು ಅವರಿಗೆ ನೀತಿಯುಳ್ಳ ನಿಯಮವನ್ನೂ ಕೊಟ್ಟನು ಮತ್ತು ಅವರೊಂದಿಗೆ ಇರುವೆನೆಂದು ವಾಗ್ದಾನ ಮಾಡಿದನು. ತಮ್ಮ ಸ್ವಂತ ಒಳ್ಳೆಯ ಕಾರ್ಯಗಳಿಂದ ಯಾವುದೇ ಜನಾಂಗವು ದೇವರ ನೀತಿಯನ್ನು ಪಡೆದುಕೊಳ್ಳಬಹುದಾಗಿದ್ದರೆ, ಇಸ್ರಾಯೇಲ ಜನಾಂಗವು ಒಂದಾಗ ಬಹುದಿತ್ತು ಯಾಕಂದರೆ ದೇವರು ಅವರನ್ನು ಪಾಪಭರಿತ ಜನಾಂಗಗಳಿಂದ ಬೇರೆ ಮಾಡಿದ್ದನು ಹಾಗೂ ಅವರ ಅಗತ್ಯತೆಗಳನ್ನು ಪೂರೈಸಿದ್ದನು. ಅಂಥ ಲಾಭಗಳಿದ್ದರೂ ಅವರು ಪಾಪ ಮಾಡಿದರು.

ಧರ್ಮಶಾಸ್ತ್ರದ ಅಧೀನತೆಯಲ್ಲಿ ಒಬ್ಬನು ರಕ್ಷಣೆಯನ್ನು ಸಾಧಿಸಿಕೊಳ್ಳಲಾರನೆಂಬುದನ್ನು ಕಲಿಯಲಿಕ್ಕೆ ಸಾಕಷ್ಟು ವರ್ಷಗಳನ್ನು ಇಸ್ರಾಯೇಲ್ಯರಿಗೆ ಕೊಡುವದರಿಂದ, ಎಲ್ಲಾ

ಜನರು ಪಾಪಿಗಳೆಂದು ದೇವರು ತೋರಿಸಿದ್ದಾನೆ; ಒಳ್ಳೇ ಕ್ರಿಯೆಗಳಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳಲಾರೆವು; ನಮಗೊಬ್ಬ ರಕ್ಷಕನ ಅವಶ್ಯಕತೆ ಇರುತ್ತದೆ. ಈ ರೀತಿಯಲ್ಲಿ, ನಾವು ನಂಬಿಕೆಯಿಂದ ನೀತಿವಂತರಾಗುವಂತೆ, ಧರ್ಮಶಾಸ್ತ್ರವು ನಮ್ಮನ್ನು "ಕ್ರಿಸ್ತನ ಬಳಿಗೆ ನಡಿಸುವಂತೆ ನಮ್ಮ ಬೋಧಕ"ನಾಗಿರುತ್ತದೆ (ಗಲಾತ್ಯ 3:24). ಯೇಸುವಿಲ್ಲದೆ ಒಬ್ಬನು ತನ್ನಷ್ಟಕ್ಕೆತಾನೇ ರಕ್ಷಿಸಿ ಕೊಳ್ಳುವೆನೆಂದು ಯಾರೂ ವಾದಿಸಲಾರರು, ಯಾಕಂದರೆ ಇಸ್ರಾಯೇಲ್ಯರ ಮುಖಾಂತರ - ಅತ್ಯುತ್ತಮ ವಾದ ವಾತಾವರಣದಲ್ಲಿರುವವರೂ ಪಾಪಿಗಳಾಗಿದ್ದಾರೆ ಮತ್ತು ನೀತಿವಂತರಾಗಿ ಮಾಡಲ್ಪಡಲು ಯೇಸುವಿನ ಅಗತ್ಯತೆಯುಳ್ಳವರಾಗಿದ್ದಾರೆ ಎಂಬುದನ್ನು ದೇವರು ತೋರಿಸಿದ್ದಾನೆ.

## ಒಂದು ಹೆಚ್ಚು ಉತ್ತಮವಾದ ಮಾರ್ಗ

ಧರ್ಮಶಾಸ್ತ್ರ ಮತ್ತು ಹೊಸ ಒಡಂಬಡಿಕೆಯು ನೀತಿಗೆ ತಮ್ಮ ಮಾರ್ಗಗಳಲ್ಲಿ ಭಿನ್ನವಾಗಿರುತ್ತವೆ. ಅವುಗಳ ಪ್ರಾಮುಖ್ಯತೆಗಳಲ್ಲಿ ಭಿನ್ನತೆ ಇರುತ್ತದೆ. ಮೊದಲನೆಯ ಒಡಂಬಡಿಕೆಯು ಮನುಷ್ಯನ ಕ್ರಿಯೆಗಳನ್ನು ನಡಿಸಿದ ನಿಮಯಗಳನ್ನು ಒತ್ತಿಹೇಳಿತು, ಆದರೆ ಎರಡನೆಯ ಒಡಂಬಡಿಕೆಯು ಶರೀರಭಾವವನ್ನು ನಿಯಂತ್ರಿಸುವ ಆತ್ಮನ ಗುಣಗಳೊಂದಿಗೆ ಹೆಚ್ಚಾಗಿ ವ್ಯವಹರಿಸುತ್ತದೆ.

ಮೊದಲನೆಯ ಒಡಂಬಡಿಕೆಯು ನಕಾರಾತ್ಮಕವಾದವುಗಳಲ್ಲಿ ಮೇಲಾಗಿದ್ದು ಸಕಾರಾತ್ಮಕವಾದವುಗಳಲ್ಲಿ ಕಡಿಮೆಯಾಗಿತ್ತು; ಎರಡನೆಯ ಒಡಂಬಡಿಕೆಯು ಸಕಾರಾತ್ಮಕವಾದವುಗಳಲ್ಲಿ ಹೆಚ್ಚಾಗಿದ್ದು, ಕೆಟ್ಟದಾದದ್ದನ್ನು ಮಾಡಬಾರದೆಂದು ಹೇಳುತ್ತದೆ. ಪರ್ವತ ಪ್ರಸಂಗದಲ್ಲಿ ಯೇಸುವು ಮಾಡಬಾರದ ಕೆಲವು ಸಂಗತಿಗಳ ಬಗ್ಗೆ ಹೇಳಿದನು.[2] ಪೌಲನೂ ಸಹ ಕ್ರೈಸ್ತರು ಮಾಡಬಾರದ ಸಂಗತಿಗಳನ್ನು ಹೇಳಿದನು.[3] ಹೊಸ ಒಡಂಬಡಿಕೆಯಲ್ಲಿ ಇವು "ನೀನು ಮಾಡಬಾರದು" ಎಂಬ ಕೆಲವು ಹೇಳಿಕೆಗಳಾಗಿವೆ. ಹೊಸ ಒಡಂಬಡಿಕೆಯಲ್ಲಿ ಜನರು ಹೇಗೆ ಜೀವಿಸಬೇಕೆಂಬುದನ್ನು ಕುರಿತು ಹೇಳಿದ ಆಜ್ಞೆಗಳು ನಕಾರಾತ್ಮಕವಾದವುಗಳಿಗಿಂತ ಹೆಚ್ಚಾಗಿ ಸಕಾರಾತ್ಮಕವಾದವುಗಳಾಗಿವೆ. ಹಳೇ ಒಡಂಬಡಿಕೆಯಲ್ಲಿ ಹೇಳಿಕೆಗಳು ಸಕಾರಾತ್ಮಕವಾದವುಗಳಿಗಿಂತ ಹೆಚ್ಚಾಗಿ ನಕಾರಾತ್ಮಕವಾದವುಗಳಾಗಿವೆ.

## ಹೆಚ್ಚು ಉತ್ತಮವಾದ ವಾಗ್ದಾನಗಳು

ಎರಡನೆಯ ಒಡಂಬಡಿಕೆಯು ಮೊದಲನೆಯ ಒಡಂಬಡಿಕೆಗಿಂತ ಹೆಚ್ಚು ಉತ್ತಮವಾದದ್ದಾಗಿದೆ, ಯಾಕಂದರೆ ಅದರ ವಾಗ್ದಾನಗಳು ಮೊದಲನೆಯ ಒಡಂಬಡಿಕೆಯಲ್ಲಿ ಕೆಟ್ಟವುಗಳಿಗಿಂತ ಹೆಚ್ಚು ಉತ್ತಮವಾದವುಗಳಾಗಿರುತ್ತವೆ (ಇಬ್ರಿಯ 8:6). ವಿಧೇಯತೆಯು ನಿತ್ಯ ರಕ್ಷಣೆಯೊಂದಿಗೆ ಪರಲೋಕದಲ್ಲಿ (1 ಪೇತ್ರ 1:3, 4) ಬಹುಮಾನಿಸಲ್ಪಡುವುದು ಎಂದು ದೇವರು ಇಸ್ರಾಯೇಲ್ಯರಿಗೆ ವಾಗ್ದಾನ ಮಾಡಲಿಲ್ಲ (ಇಬ್ರಿಯ 5:9). ಬದಲಾದ, ದೇವರ ಹೋಲಿಕೆಯಿರುವ ಪುನರುತ್ಥಾನವಾದ ದೇಹದ ಬಗ್ಗೆ ಹಳೇ ಒಡಂಬಡಿಕೆಯಲ್ಲಿ ಹೇಳಲ್ಪಟ್ಟಿರುವದಿಲ್ಲ (ಫಿಲಿಪ್ಪಿ 3:21; 1 ಯೋಹಾನ 3:2). ಎರಡನೆಯ ಒಡಂಬಡಿಕೆಯ ಅಧೀನತೆಯಲ್ಲಿ ನಂಬಿಕೆಯಿಂದ ಜೀವಿಸುವವರಿಗೆ ಅಂಥ ವಾಗ್ದಾನವನ್ನು ಆತನು ಮಾಡಿದ್ದಾನೆ. ಈ ಹೊಸ ಒಡಂಬಡಿಕೆಯ ವಾಗ್ದಾನಗಳು ಹಳೇ ಒಡಂಬಡಿಕೆಯ ದೀರ್ಘಾಯುಷ್ಯ ಮತ್ತು ಇಸ್ರಾಯೇಲ್ಯರ ದೇಶದಲ್ಲಿ ಲೌಕಿಕ ಸಮೃದ್ಧಿಯ ವಾಗ್ದಾನಗಳಿಗಿಂತ

- ಹೆಚ್ಚು ಉತ್ತಮವಾದವುಗಳಾಗಿವೆ (ಧರ್ಮೋಪದೇಶಕಾಂಡ 5:33).

ದೇವರು ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡ ಒಡಂಬಡಿಕೆಯು ನಿತ್ಯಜೀವದ ಇಲ್ಲವೇ ಪರಲೋಕದ ವಾಗ್ದಾನವನ್ನು ಮಾಡಲಿಲ್ಲ ಅದು ಅಂಥ ವಾಗ್ದಾನಗಳನ್ನು ಒಳಗೊಳ್ಳದೇ ಇದ್ದುದರಿಂದ, ಪರಲೋಕದಲ್ಲಿ ನಿತ್ಯಜೀವವನ್ನು ಹೊಂದಿಕೊಳ್ಳುವುದು ಆ ಒಡಂಬಡಿಕೆಯನ್ನು ಕೈಕೊಳ್ಳುವದರ ಬಗ್ಗೆ ಅವಲಂಭಿಸಿರಲಿಲ್ಲ. ಹಳೇ ಒಡಂಬಡಿಕೆಯ ಅಂಥ ವಾಗ್ದಾನಗಳನ್ನು ಮಾಡಿದ್ದರೆ, ಆಗ ಹೊಸ ಒಡಂಬಡಿಕೆಯಲ್ಲಿ ಹೆಚ್ಚು ಉತ್ತಮ ವಾಗ್ದಾನಗಳು ಇರುತ್ತಿರಲಿಲ್ಲ. ಇನ್ನೊಂದು ಕಡೆಯಲ್ಲಿ, ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ನವೀಕರಿಸಲ್ಪಟ್ಟ, ಸಮೃದ್ಧಿಯುಳ್ಳ ಭೂಲೋಕವು ಮಾತ್ರವೇ ವಾಗ್ದಾನ ಮಾಡಲ್ಪಟ್ಟಿದ್ದರೆ, ಅದಕ್ಕೆ ಮೊದಲನೆಯ ಒಡಂಬಡಿಕೆಗಿಂತ ಹೆಚ್ಚು ಉತ್ತಮವಾದ ವಾಗ್ದಾನಗಳು ಇರುತ್ತಿರಲಿಲ್ಲ.

ಹೊಸ ಒಡಂಬಡಿಕೆಯು ಭಿನ್ನವಾದದ್ದೂ ಹೆಚ್ಚು ಉತ್ತಮವಾದದ್ದೂ ಆಗಿರುತ್ತದೆ. ಅದು ಹೆಚ್ಚು ಉತ್ತಮವಾದ ವಾಗ್ದಾನಗಳ ಮೇಲೆ ಸ್ಥಾಪಿಸಲ್ಪಟ್ಟಿತು (ಇಬ್ರಿಯ 8:6). ಇದಲ್ಲದೆ, ಅದು ಹೆಚ್ಚು ಉತ್ತಮವಾದ ಧರ್ಮಶಾಸ್ತ್ರ ಕೊಡುವಾತನನ್ನು (ಇಬ್ರಿಯ 3:3), ಮಧ್ಯಸ್ಥಗಾರನನ್ನು (ಇಬ್ರಿಯ 12:24), ನಿರೀಕ್ಷೆಯನ್ನು (ಇಬ್ರಿಯ 7:19), ಯಾಜಕತ್ವವನ್ನು (ಇಬ್ರಿಯ 7:21-24), ಯಜ್ಞವನ್ನು (ಇಬ್ರಿಯ 9:23), ಸ್ವಾಸ್ತ್ಯವನ್ನು (ಇಬ್ರಿಯ 10:34; 11:16), ಮತ್ತು ಬಾಧ್ಯತೆಯನ್ನು (1 ಪೇತ್ರ 1:3, 4) ಒದಗಿಸಿರುವನು.

## ಮುಕ್ತಾಯ

ದೇವರು ಭಿನ್ನವಾದ ಜನರನ್ನು ಭಿನ್ನವಾದ ಒಡಂಬಡಿಕೆಗಳಿಂದ ನಡಿಸಿದನು. ಮೋಶೆಯ ಮುಖಾಂತರ ಆತನು ಇಸ್ರಾಯೇಲ್ಯರಿಗೆ ಕೊಟ್ಟ ಒಡಂಬಡಿಕೆಯು ಯೇಸು ಕ್ರಿಸ್ತನ ಮುಖಾಂತರ ನಮಗೆ ಆತನು ಕೊಟ್ಟ ಒಡಂಬಡಿಕೆಗಿಂತ ಕಡಿಮೆ ತರಗತಿಯದ್ದಾಗಿತ್ತು. ಕ್ರೈಸ್ತ ಯುಗದಲ್ಲಿ ಹೆಚ್ಚು ಉತ್ತಮವಾದ ವಾಗ್ದಾನಗಳ ಮೇಲೆ ಕಟ್ಟಲ್ಪಟ್ಟಿರುವ ಹೆಚ್ಚು ಉತ್ತಮವಾದ ಒಡಂಬಡಿಕೆ ನಮಗಿರುತ್ತದೆ.

---

ಟಿಪ್ಪಣಿಗಳು

[1]"ಹೊಸ ಒಡಂಬಡಿಕೆ - ಸಂಪೂರ್ಣ ಕ್ಷಮಾಪಣೆ" ಎಂಬ ಪಾಠವನ್ನು ನೋಡಿರಿ. [2]ನೋಡಿರಿ ಮತ್ತಾಯ 5:34; 6:1-3, 7, 8, 16; 7:1, 6; 23:3, 8, 9. [3]ನೋಡಿರಿ ರೋಮಾಪುರ 12:2, 3, 11, 14, 16, 19; 13:13; 15:1; ಎಫೆಸ 5:7, 18; 6:4, 6; ಕೊಲೊಸ್ಸೆ 3:2, 9, 19, 21, 22.

© 2009 Truth for Today

# ಹಳೇ ಒಡಂಬಡಿಕೆ ವಿರುದ್ಧ ಹೊಸ ಒಡಂಬಡಿಕೆ

| ಮೊದಲನೆಯ ಒಡಂಬಡಿಕೆ | ಎರಡನೆಯ ಒಡಂಬಡಿಕೆ |
|---|---|
| 1. ಶಾಪಗಳು (ಗಲಾತ್ಯ 3:10) | 1. ಆಶೀರ್ವಾದಗಳು (ಗಲಾತ್ಯ 3:13, 14) |
| 2. ಕನಿಕರವಿಲ್ಲ (ಇಬ್ರಿಯ 10:28) | 2. ಕನಿಕರವಿರುವುದು (ಇಬ್ರಿಯ 8:12) |
| 3. ಶಿಕ್ಷಾವಿಧಿಯುಳ್ಳ (2 ಕೊರಿಂಥ 3:9; ಗಲಾತಿ 2:21) | 3. ನೀತಿಸ್ವರೂಪವುಳ್ಳ (2 ಕೊರಿಂಥ 5:21); ಶಿಕ್ಷಾವಿಧಿಯಿಳ್ಳದ (ರೋಮಾಪುರ 8:1) |
| 4. ಮರಣ (2 ಕೊರಿಂಥ 3:7; ರೋಮಾಪುರ 8:2ಬಿ) | 4. ಜೀವ (ರೋಮಾಪುರ 8:2ಎ) |
| 5. ಪರಿಣಾಮಕಾರಿಯಾಗದ ಯಜ್ಞ (ಇಬ್ರಿಯ 10:4, 11) | 5. ಪರಿಣಾಮಕಾರಿಯಾದ ಯಜ್ಞ (ಮತ್ತಾಯ 26:28) |
| 6. ಪಾಪಭರಿತ - ದುರಾಶೆಗಳನ್ನು ಹುಟ್ಟಿಸಿತು (ರೋಮಾಪುರ 7:5, 8). | 6. ಪಾಪಭರಿತ ದುರಾಶೆಗಳನ್ನು ಜಯಿಸಲು ನಮಗೆ ಸಹಾಯಕವಾಗಿರುವುದು (ಗಲಾತ್ಯ 5:16) |
| 7. ಶರೀರಾಧೀನ ಸ್ವಭಾವದ ಮುಖಾಂತರ ಬಲಹೀನತೆ (ರೋಮಾಪುರ 8:3); ನಿರುಪಯೋಗ (ಇಬ್ರಿಯ 7:18) | 7. ಆತ್ಮನ ಮುಖಾಂತರ ಬಲ (ಎಫೆಸ 3:16) |
| 8. ದೇವರ ಕೋಪ (ರೋಮಾಪುರ 4:15) | 8. ಸಂಧಾನ (ಕೊಲೊಸ್ಸೆ 1:22) |
| 9. ಲಿಖಿತ ರೂಪವಾದದ್ದು ಮರಣವನ್ನುಂಟು ಮಾಡುತ್ತದೆ (ರೋಮಾಪುರ 7:6; 2 ಕೊರಿಂಥ 3:6). | 9. ಆತ್ಮನು ಜೀವ ಕೊಡುತ್ತಾನೆ (ರೋಮಾಪುರ 7:6; 2 ಕೊರಿಂಥ 3:6) |
| 10. ಅಪರಿಪೂರ್ಣತೆ (ಇಬ್ರಿಯ 8:7). | 10. ಬಿಡುಗಡೆಯನ್ನುಂಟು ಮಾಡುವ ಧರ್ಮ ಪ್ರಮಾಣ (ಯಾಕೋಬ 1:25) |

ಧರ್ಮಶಾಸ್ತ್ರವು ಮನುಷ್ಯನ ಪಾಪಭರಿತತೆಯನ್ನು ಮಾತ್ರವೇ ತೋರಿಸಿತು ಆದರೆ ಅವನ ಪಾಪದೊಂದಿಗಿನ ಹೋರಾಟಕ್ಕೆ ಅದರಲ್ಲಿ ಪರಿಹಾರವಿರಲಿಲ್ಲ. ನೂತನ ಮಾರ್ಗದ ಅವಶ್ಯಕತೆ ಇತ್ತು. ಮೊದಲನೆಯದು ಏನು ಮಾಡಲಾರದಾಗಿತ್ತೋ ಅದನ್ನು, ಅದಕ್ಕೆ ವಿರುದ್ಧವಾಗಿ ಎರಡನೆಯದು ಏನು ಮಾಡಬಲ್ಲದು ಎಂಬುದನ್ನು ಈ ಕೆಳಗಿನದು ತೋರಿಸುತ್ತದೆ: “ಧರ್ಮಶಾಸ್ತ್ರವು ನಮ್ಮ ಶರೀರಾಧೀನ ಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೇ ಇತ್ತೋ ಅದನ್ನು ದೇವರೇ ಮಾಡಿದನು. ಏನೆಂದರೆ ಆತನು ಪಾಪ ನಿವಾರಣೆಗಾಗಿ ತನ್ನ ಮಗನನ್ನು ಪಾಪಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣ ದಂಡನೆಯನ್ನು ವಿಧಿಸಿದನು” (ರೋಮಾಪುರ 8:3).

| ಮೊದಲನೆಯ ಒಡಂಬಡಿಕೆ ಮಾಡಲಾರದ್ದು | ಎರಡನೆಯ ಒಡಂಬಡಿಕೆ ಮಾಡಬಲ್ಲದು |
|---|---|
| 1. ನೀತಿವಂತನೆಂದು ನಿರ್ಣಯಿಸಲಾರದು (ರೋಮಾಪುರ 3:20; ಗಲಾತ್ಯ 2:16; 3:11, 12) | 1. ನೀತಿವಂತನೆಂದು ನಿರ್ಣಯಿಸುವುದು (ರೋಮಾಪುರ 5:1) |
| 2. ಬಾಧ್ಯಸ್ಥರನ್ನಾಗಿ ಮಾಡಲಾರದು (ರೋಮಾಪುರ 4:14) | 2. ಬಾಧ್ಯಸ್ಥರನ್ನಾಗಿ ಮಾಡುವುದು (ರೋಮಾಪುರ 8:17; ಗಲಾತ್ಯ 4:7) |
| 3. ನೀತಿವಂತರನ್ನಾಗಿ ಮಾಡಲಾರದು (ಗಲಾತ್ಯ 2:21) | 3. ನೀತಿವಂತರನ್ನಾಗಿ ಮಾಡುವುದು (ರೋಮಾಪುರ 3:21, 22) |
| 4. ಆಶೀರ್ವದಿಸದು (ಗಲಾತ್ಯ 3:10) | 4. ಅಶೀರ್ವದಿಸುವುದು (ಎಫೆಸ 1:3) |
| 5. ಸ್ವಾಸ್ತ್ಯವನ್ನು ಕೊಡಲಾರದು (ಗಲಾತ್ಯ 3:18) | 5. ಸ್ವಾಸ್ತ್ಯವನ್ನು ಕೊಡುವುದು (ಗಲಾತ್ಯ 3:29) |
| 6. ಜೀವ ಕೊಡಲಾರದು (ಗಲಾತ್ಯ 3:21) | 6. ಜೀವ ಕೊಡುವುದು (1 ಯೊಹಾನ 5:11) |
| 7. ರಕ್ಷಿಸಲಾರದು (ರೋಮಾಪುರ 10:1)[1] | 7. ರಕ್ಷಿಸುವುದು (ಅಪೊಸ್ತಲರ ಕೃತ್ಯಗಳು 4:12; ಇಬ್ರಿಯ 7:25) |
| 8. ಪರಿಪೂರ್ಣರನ್ನಾಗಿ ಮಾಡಲಾರದು (ಇಬ್ರಿಯ 7:19) | 8. ಪರಿಪೂರ್ಣ ಮಾಡುವುದು (ಇಬ್ರಿಯ 10:14) |
| 9. ಪಾಪಗಳನ್ನು ಕ್ಷಮಿಸಲಾರದು (ಇಬ್ರಿಯ 10:4) | 9. ಪಾಪಗಳನ್ನು ಕ್ಷಮಿಸುವುದು (ಮತ್ತಾಯ 26:28) |

ಮೊದಲನೆಯ ಒಡಂಬಡಿಕೆಯು - ತನ್ನ ನಿಯಮ, ಕಟ್ಟಳೆ ಮತ್ತು ಆಜ್ಞೆಗಳಿಂದ ಒದಗಿಸಲಾರದ್ದನ್ನು - ಯೇಸುವು ನಮಗೆ ತಂದನು: "ಮೊದಲನೆಯ ಒಡಂಬಡಿಕೆಯು ದೋಷವಿಲ್ಲದ್ದಾಗಿದ್ದರೆ ಎರಡನೆಯ ಒಡಂಬಡಿಕೆಗೆ ಅವಕಾಶವಿರುತ್ತಿರಲಿಲ್ಲ" (ಇಬ್ರಿಯ 8:7).

---

ಟಿಪ್ಪಣಿ

[1]ಇದನ್ನು ಅನ್ವಯಿಸುವದರಿಂದ, ಕ್ರೈಸ್ತ ಯುಗದಲ್ಲಿ ಧರ್ಮಶಾಸ್ತ್ರವನ್ನು ಕೈ ಕೊಳ್ಳುವುದರಿಂದ ರಕ್ಷಿಸಲ್ಪಡಲು ಹುಡುಕುತ್ತಿದ್ದವರು ತಪ್ಪಿಹೋದರು ಎಂದು ಪೌಲನು ಹೇಳಿದನು.

© 2009 Truth for Today